# 2ನೇ ತರಗತಿ ಕನ್ನಡ 9ನೇ ಮೈಲಿಗಲ್ಲು

## 9. ಚಿತ್ರವನ್ನು ಹೆಸರಿಸು 101

ಹೆಬ್ಬಾವು, ಕಬ್ಬು, ಹೆಬ್ಬೆರಳು, ಗುಬ್ಬಿ






## 9. ಒತ್ತಕ್ಷರ ಗುರುತಿಸಿ ಬರೆ 102

ಸೂಚನೆ: "ಬ" ಅಕ್ಷರದ ಒತ್ತಕ್ಷರವು ಮೂಲಾಕ್ಷರದಂತೆಯೇ ಇರುತ್ತದೆ ಎಂದು ಹೇಳಿಕೊಡುವುದು.
ಅಕ್ಷರದ ಕೆಳಭಾಗದ ಬಲಬದಿಯಲ್ಲಿ ಮೂಲಾಕ್ಷರಕ್ಕಿಂತ ಚಿಕ್ಕ ಅಳತೆಯಲ್ಲಿ ಬರೆಯಬೇಕೆಂದು ಹೇಳಿಕೊಡುತ್ತಾ ಅಭ್ಯಾಸ ಮಾಡುಸುವುದು.



ಹಬ್ಬ, ದಿಬ್ಬ, ಜುಬ್ಬ, ಹುಬ್ಬು, ಹೆಬ್ಬಾವು, ದಿಬ್ಬಣ.

## 9. ಚಿತ್ರಪದ ಮತ್ತು ಸಾಧನಾ ಪದಗಳು 104

| | | | |
|---|---|---|---|
| ಕಬ್ಬು | ಹುಬ್ಬು | ತಬ್ಬಲಿ | ಹೆಬ್ಬಾಗಿಲು |
| ಹೆಬ್ಬಾವು | ಸುಬ್ಬ | ಹೆಬ್ಬುಲಿ | ಅಬ್ಬರಿಸು |
| ಗುಬ್ಬಿ | ದಿಬ್ಬ | ಸಿಬ್ಬಂದಿ | ಹಬ್ಬದೂಟ |
| ಹೆಬ್ಬೆರಳು | ಇಬ್ಬನಿ | ಕಬ್ಬಿಣ | ತೋರ್ಬೆರಳು |
| ಡಬ್ಬ | ಇಬ್ಬರು | ಹೆಬ್ಬಂಡೆ | ಒಬ್ಬಂಟಿಗ |
| ಜುಬ್ಬ | ಒಬ್ಬಟ್ಟು | ಹೆಬ್ಬೆಟ್ಟು | ಸದ್ಬಳಕೆ |
| ಹಬ್ಬ | ದಿಬ್ಬಣ | ಉಲ್ಬಣ | |

## 9. ಅಭ್ಯಾಸ ಪುಸ್ತಕ (ಚಿತ್ರನೋಡಿ ಬಿಟ್ಟ ಅಕ್ಷರ ಬರೆ) 105

ಸೂಚನೆ: ಅಭ್ಯಾಸ ಪುಸ್ತಕದಲ್ಲಿ ಮೆಟ್ಟಿಲು ಸಂಖ್ಯೆ 105 ನ್ನು ಪೂರ್ಣಗೊಳಿಸುವುದು.

## 9. ಚಿತ್ರಸಹಿತ ವಾಕ್ಯ 106



ಹಬ್ಬದ ದಿನ ಸಡಗರದ ದಿನ.
ಹಬ್ಬದ ದಿನ ಹೊಸ ಬಟ್ಟೆ ಧರಿಸುವೆವು.



ದೀಪಾವಳಿ ದೀಪಗಳ ಹಬ್ಬ.



ಗಣಪತಿ ಹಬ್ಬದ ದಿನ ಕಡುಬನು ಮಾಡುವರು.



ರಂಜಾನ್ ಹಬ್ಬದ ದಿನ ಮಸೀದಿಗೆ ಹೋಗುವರು.



ಡಿಸಂಬರ ತಿಂಗಳಲಿ ಯೇಸುವಿನ ಹುಟ್ಟಿದ ಹಬ್ಬ ಆಚರಿಸುವರು.



ಶಾಲೆಯಲಿ ಗಾಂಧೀಜಿಯ ಹುಟ್ಟಿದ ಹಬ್ಬ ಆಚರಿಸುವೆವು.

ಸೂಚನೆ: ಈ ಮೇಲಿನ ವಾಕ್ಯಗಳನ್ನು ಓದಿ, ನಂತರ ನೋಟ್ ಪುಸ್ತಕದಲ್ಲಿ ಬರೆಯಲು ತಿಳಿಸುವುದು.
ಉಕ್ತಲೇಖನ ಬರೆಸುವುದು.

## 9. ಅಭ್ಯಾಸ ಪುಸ್ತಕ (ಚಿತ್ರನೋಡಿ ಬಿಟ್ಟ ಅಕ್ಷರ ಬರೆ) 107

ಸೂಚನೆ: ಅಭ್ಯಾಸ ಪುಸ್ತಕದಲ್ಲಿ ಮೆಟ್ಟಿಲು ಸಂಖ್ಯೆ 107 ನ್ನು ಪೂರ್ಣಗೊಳಿಸುವುದು.

## 9. ಅಭ್ಯಾಸ ಪುಸ್ತಕ (ಚಿತ್ರನೋಡಿ ಬಿಟ್ಟ ಅಕ್ಷರ ಬರೆ) 108

ಸೂಚನೆ: ಅಭ್ಯಾಸ ಪುಸ್ತಕದಲ್ಲಿ ಮೆಟ್ಟಿಲು ಸಂಖ್ಯೆ 108 ನ್ನು ಪೂರ್ಣಗೊಳಿಸುವುದು.

## 9. ಓದಿ ಉತ್ತರಿಸು (ಹಬ್ಬ) 109

# ಹಬ್ಬ

ಹಬ್ಬವೆಂದರೆ ಸಕಲರಿಗೂ ಸಡಗರ. ಕಿರಿಯರಿಂದ ಹಿರಿಯರಾದಿಯಾಗಿ ಸಂತೋಷದಿಂದ ಭಾಗವಹಿಸುವರು. ಊರು ಹೊಸಬಟ್ಟೆ ತೊಟ್ಟು ಸಿಹಿ ಹಂಚುವರು. ಬಂಧು–ಬಳಗ, ಊರ ಜನರು ಸೇರಿ ಆಚರಿಸುವ ಹಬ್ಬಗಳೇ ಊರ ಹಬ್ಬಗಳು.

'ದಸರ' ಕರುನಾಡಿನ ಸಡಗರದ ನಾಡಹಬ್ಬ, 'ಯುಗಾದಿ' ಹಿಂದುಗಳು ಆಚರಿಸುವ ಹಬ್ಬ. ಉಪವಾಸದ ಅರಿವು ಮೂಡಿಸುವ ಹಬ್ಬವೇ 'ರಂಜಾನ್'. ಯೇಸುವಿನ ಹುಟ್ಟಿದ ಹಬ್ಬ ಸೇರಿದಂತೆ ಹಲವು ಹಬ್ಬಗಳಿವೆ. ಹಬ್ಬಗಳೆಂದರೆ ಸಕಲರೂ ಸಂತಸದಿಂದ ಸೇರುವ ಮಹಾದಿನಗಳೇ ಆಗಿವೆ.

**ಉತ್ತರಿಸು:**

1. ಕರುನಾಡಿನ ನಾಡ ಹಬ್ಬ ಯಾವುದು?

ಉತ್ತರ: ____________________________________________

2. ಊರಜನ ಸೇರಿ ಆಚರಿಸುವ ಹಬ್ಬವೇ ____________________
3. ಉಪವಾಸದ ಅರಿವು ಮೂಡಿಸುವ ಹಬ್ಬವೇ ________________________

## 9. ಸುಬ್ಬು ಹೇಳಿದ ಕಥೆ (ವಾಚಕ) 110

ಸುಬ್ಬು ಎರಡನೆಯ ತರಗತಿಯ ಹುಡುಗ. ಅವನಿಗೆ ಗೊಂಬೆಯಾಟ ಆಡಿಸುವುದು ಎಂದರೆ ತುಂಬಾ ಇಷ್ಟ.

" ಇಂದು ಗೊಂಬೆಯಾಟ ಆಡಿಸು ಬಾ ಸುಬ್ಬು" ಎಂದು ಟೀಚರು ಹೇಳಿದರು.

ಸುಬ್ಬು ಕಥೆ ಹೇಳಲು ಮುಂದೆ ಬಂದ. ಸುಬ್ಬು ಕಥೆ ಹೇಳಲು ಶುರು ಮಾಡಿದ.

ಇಂದಿನ ಗೊಂಬೆಯಾಟದ ಹೆಸರು " ಯಾರು ಮಿಗಿಲು?" ಈ ದಿನ ಕೋತಿಯ ಹೆಸರು ಚಿಂಟು. ಒಂದು ದಿನ ಚಿಂಟು ನಡೆದು ಬರುವಾಗ ಯಾರೋ ಜಗಳ ಆಡುವುದು ಕೇಳಿಸಿತು.

ಬೆರಳುಗಳು ಜಗಳವಾಡುವುದ ಕಂಡನು. " ಯಾಕೆ ಜಗಳ ಆಡುವಿರಿ?" ಎಂದು ಚಿಂಟು ಕೇಳಿದ.

" ನಾನು ಮಿಗಿಲು" ಎಂದು ಬೆರಳುಗಳು ಕೂಗಿದವು. " ಒಬ್ಬೊಬ್ಬರೆ ಮಾತನಾಡಿ" ಎಂದ ಚಿಂಟು.

ಕಿರುಬೆರಳು ಹೇಳಿತು "ನಾನೇ ಉಳಿದವರಿಗಿಂತ ಮಿಗಿಲು, ಏಕೆಂದರೆ ಯಾರಿಗಾದರೂ ಗೌರವ ನೀಡುವಾಗ ನಾನೇ ಮುಂದಿರುವೆ." ಉಂಗುರದ ಬೆರಳು ಹೇಳಿತು. "ಚಂದದ ಉಂಗುರ ಧರಿಸುವುವವನು ನಾನು. ಹಾಗಾಗಿ ನಾನೇ ಮಿಗಿಲು."

" ನಾನೇ ಬೆರಳುಗಳ ರಾಜ. ಹಾಗಾಗಿ ನಾನೇ ಮಿಗಿಲು." ಎಂದು ನಡುವಿನ ಬೆರಳು ಹೇಳಿತು.

ತೋರ್ಬೆರಳು ಹೇಳಿತು " ಏನೇ ತೋರಿಸಬೇಕಾದರೂ ನಾನೇ ಮುಂದಿರುವೆ. ಹಾಗಾಗಿ ನಾನೇ ಮಿಗಿಲು."

ಹೆಬ್ಬೆರಳು ಹೇಳಿತು " ನಾನು ಜಯದ ಸಂಕೇತ, ಹಾಗಾಗಿ ಉಳಿದ ಬೆರಳುಗಳಿಗಿಂತ ನಾನೇ ಮಿಗಿಲು."

" ಜಗಳವಾಡುವುದು ಬೇಡ. ಕೇಳಿರಿ, ಊಟ ಮಾಡುವಾಗ ಐದು ಬೆರಳುಗಳು ಬೇಕು ತಾನೇ? ಯಾವುದೇ ಕೆಲಸ ಮಾಡಬೇಕಾದರೂ ನೀವುಗಳು ಒಟ್ಟಿಗೆ ಇರಲೇಬೇಕು" ಎಂದಿತು ಚಿಂಟು.

ಹಾಗಾದರೆ ನಾವು ಐವರು ಸಮಾನರು ಎಂದುಕೊಂಡು ಬೆರಳುಗಳೂ ಸಮಾಧಾನಪಟ್ಟವು.

ಸುಬ್ಬು ಹೇಳಿದ ಕಥೆ ಮುಗಿಯಿತು. ಹುಡುಗರು ಖುಷಿಯಿಂದ ಕೈ ತಟ್ಟಿದರು. " ಹೌದು, ಒಟ್ಟಿಗೆ ಇರುವುದರಿಂದ ಏನು ಬೇಕಾದರೂ ಸಾಧಿಸಬಹುದು" ಎಂದು ಟೀಚರು ಹೇಳಿದರು.

## 9. ಸುಬ್ಬ, ಸುಬ್ಬಿಯರ ಹುಟ್ಟಿದ ಹಬ್ಬ (ವಾಚಕ) 111

ಸುಬ್ಬ ಹಾಗೂ ಸುಬ್ಬಿ ಅವಳಿಜವಳಿಗಳು. ಇಂದು ಇವರ ಹುಟ್ಟುಹಬ್ಬ. " ನೀವು ಶಾಲೆಗೆ ಹೋಗುವ ಮುಂಚೆ ದೇವರ ಗುಡಿಗೆ ಹೋಗಿ ನಮಿಸಿರಿ. ಆದರೆ ದಾರಿಯ ನಡುವೆ ಹೆಬ್ಬಾವುಗಳಿವೆ. ಹುಷಾರಾಗಿ ಹೋಗಿ" ಎಂದು ತಾಯಿ ಅವರಿಗೆ ಹೇಳಿದಳು.

ಇಬ್ಬರೂ ಶಾಲೆಗೆ ಹೊರಟರು. ಕಬ್ಬಿನತೋಟದ ಬಳಿ ನಡೆದರು. ತೋಟದೊಳಗೆ ಗುಬ್ಬಿಗಳ ಕೂಗು ಕೇಳಿಸಿತು. ದೇವರ ಗುಡಿಗೆ ಹೋಗಿ ನಮಿಸಿದರು. ನಂತರ ಶಾಲೆಗೆ ಸರಸರನೆ ಓಡಿದರು.

ಸುಬ್ಬ ಹಾಗೂ ಸುಬ್ಬಿ ತರಗತಿ ಒಳಗೆ ಬಂದು ಹುಟ್ಟುಹಬ್ಬದ ಚಾಕಲೇಟು ಹಂಚಿದರು. ಆಗ ಟೀಚರು " ಸುಬ್ಬ-ಸುಬ್ಬಿಯ ನೋಡಿ ನನಗೆ ಅವಳಿಜವಳಿಯರ ಕಥೆ ನೆನಪಾಯಿತೆಂದರು. ನಾನು ಈಗ ನಿಮಗೆ ರಾಮಾಯಣದ ಲವ-ಕುಶರ ಕಥೆ ಹೇಳುವೆ."

ರಾಮ ಕಳುಹಿಸಿದ ಕುದುರೆಯನು ಲವ-ಕುಶರು ಕಟ್ಟಿಹಾಕಿದ ದಿಟ್ಟತನದ ಕಥೆಯನು ಟೀಚರು ಹೇಳಿದರು. ಆ ಅವಳಿಜವಳಿಯರ ಕಥೆಯನು ಹುಡುಗರು ಗಮನವಿಟ್ಟು ಕೇಳಿದರು.

ಸಂಜೆ ಶಾಲೆ ಮುಗಿದ ಮೇಲೆ ಸುಬ್ಬ ಹಾಗೂ ಸುಬ್ಬಿ ಓಡಿ ಮನೆ ಸೇರಿದರು. ಇಬ್ಬರು ಕೈಕಾಲು ತೊಳೆದು ಒಳಗೆ ಬಂದರು. ತಾಯಿ ಕೊಟ್ಟ ಒಬ್ಬಟ್ಟು ಇಬ್ಬರೂ ತಿಂದರು.

" ಈ ದಿನ ಗೆಳೆಯರಿಗೆ ಚಾಕಲೇಟು ಕೊಟ್ಟೆವು. ನಿನಗೂ ಒಂದು ಚಾಕಲೇಟು ತೆಗೆದುಕೋ ಅಜ್ಜಿ" ಎಂದಳು ಸುಬ್ಬಿ. " ಟೀಚರು ಹೇಳಿರುವ ಲವ-ಕುಶರ ಕಥೆ ನಾನೇ ನಿನಗೆ ಹೇಳುವೆ ಬಾ ಅಜ್ಜಿ " ಎಂದ ಸುಬ್ಬ.

## 9. ಅಭ್ಯಾಸ ಪುಸ್ತಕ (ನನ್ನ ಸಾಧನೆ) 112

ಸೂಚನೆ: ಅಭ್ಯಾಸ ಪುಸ್ತಕದ 112 ನೇ ಮೆಟ್ಟಿಲನ್ನು ಪೂರ್ಣಗೊಳಿಸುವುದು.